ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1610
2. ಸದಸ್ಯರ ಹೆಸರು : ಡಾ॥ ವೈ.ಎ.ನಾರಾಯಣಸ್ವಾಮಿ
3. ಉತ್ತರಿಸಬೇಕಾದ ದಿನಾಂಕ : 18-03-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಕಾವೇರಿ ನದಿಗೆ ಅಡ್ಡಲಾಗಿ ಮೇಕೆ-ದಾಟುವಿನ ಬಳಿ "Balancing reservoir" ಅನ್ನು ಕಟ್ಟಲು ಸರ್ಕಾರ ಉದ್ದೇಶಿಸಿದೆಯೇ;	ಹೌದು.
ಆ	ಉದ್ದೇಶಿಸಿದ್ದರೆ, ಇದರ ವಿವರಗಳನ್ನು ನೀಡುವುದು;	**ಸದರಿ ಯೋಜನೆಯ ಪ್ರಮುಖ ಅಂಶಗಳು ಕೆಳಕಂಡಂತಿರುತ್ತದೆ :** i. ಕಾವೇರಿ ನದಿಗೆ ಕೃಷ್ಣರಾಜಸಾಗರ ಅಣೆಕಟ್ಟೆ ಕೆಳಭಾಗದಲ್ಲಿ ಮೇಕೆದಾಟು ಸಮೀಪ ಸಮತೋಲನ / ಶೇಖರಣಾ ಜಲಾಶಯವನ್ನು (Balancing / Storage reservoir) ನಿರ್ಮಿಸುವ ಸಲುವಾಗಿ ರೂ.9,000.00 ಕೋಟಿಗಳ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದೆ. ii. ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪು ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:16-02-2018 ರ ಅದೇಶದನ್ವಯ ತಮಿಳುನಾಡು ರಾಜ್ಯಕ್ಕೆ ಸಾಮಾನ್ಯ ಮಳೆ ವರ್ಷದಲ್ಲಿ 177.25 ಟಿ.ಎಂ.ಸಿ. ನೀರನ್ನು ಮಾಸಿಕವಾರು ನಿಗದಿಪಡಿಸಿದಂತೆ ಹರಿಸಲು ಅನುಕೂಲವಾಗುತ್ತದೆ. iii. ಬೆಂಗಳೂರು ನಗರಕ್ಕೆ ಸರ್ವೋಚ್ಚ ನ್ಯಾಯಾಲಯದಿಂದ ಹಂಚಿಕೆಯಾಗಿರುವ 4.75 ಟಿ.ಎಂ.ಸಿ ನೀರನ್ನು (Consumptive use) ಕುಡಿಯುವ ನೀರಿಗಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. iv. ತಮಿಳುನಾಡಿಗೆ ಹರಿಸಬೇಕಾದ ನೀರಿನಲ್ಲಿ ಮತ್ತು Natural bed profile ಅನ್ನು ಉಪಯೋಗಿಸಿಕೊಂಡು ಸುಮಾರು 400 ಮೆಗಾವ್ಯಾಟ್ ವಿದ್ಯುತ್‌ಅನ್ನು ಉತ್ಪಾದಿಸಬಹುದಾಗಿದೆ.
ಇ	ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬೇಕಾಗಿರುವ ಎಲ್ಲಾ ಅನುಮತಿಗಳನ್ನು ಪಡೆಯಲಾಗಿದೆಯೇ;	**ಮೇಕೆದಾಟು ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲು ಅವಶ್ಯವಿರುವ ತೀರುವಳಿ ವಿವರ ಕೆಳಕಂಡಂತಿದೆ :** 1. ಮೇಕೆದಾಟು ಯೋಜನೆಯ ಡಿ.ಪಿ.ಆರ್ ಅನ್ನು ದಿನಾಂಕ:18-01-2019 ರಂದು ಕೇಂದ್ರ ಜಲ ಆಯೋಗ, ನವದೆಹಲಿಗೆ ಸಲ್ಲಿಸಲಾಗಿದ್ದು, ಪ್ರಸ್ತುತ ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳ ಪರಿಶೀಲನೆಯಲ್ಲಿದೆ. 2. ಕೇಂದ್ರ ಜಲ ಆಯೋಗ, ನವದೆಹಲಿ ರವರು ಸದರಿ ಯೋಜನೆಯ ಕುರಿತು Cauvery Water Management Authority (CWMA) ರವರ ಅಭಿಪ್ರಾಯ ಕೋರಿದೆ. **ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ತೀರುವಳಿ:** 3. ಯೋಜನೆಗೆ ಅವಶ್ಯವಿರುವ Environmental Impact Assessment (EIA) & Environmental Management Plan (EMP) ವರದಿಗಳನ್ನು ತಯಾರಿಸಲು Terms of Reference (ToR) ಅರ್ಜಿಯನ್ನು ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯದ (MoEF & CC) ಅಂತರ್ಜಾಲದಲ್ಲಿ ದಿನಾಂಕ:20-06-2019 ರಂದು ಅಪ್‌ಲೋಡ್ ಮಾಡಲಾಗಿತ್ತು, ತದನಂತರ ದಿನಾಂಕ:19-07-2019 ರಂದು ನಡೆದ Expert Appraisal Committee (EAC), MoEF & CC ಸಭೆಯಲ್ಲಿ

... 2

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
		ಸೂಚಿಸಿರುವ ಹೆಚ್ಚುವರಿ ಮಾಹಿತಿಗಳನ್ನು ದಿನಾಂಕ:04-10-2019 ರಂದು MoEF & CC ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ. 4. ಪ್ರಸ್ತಾಪಿತ ಯೋಜನೆಗೆ ಒಟ್ಟಾರೆಯಾಗಿ 5252 ಹೆ. ಪ್ರದೇಶ ಅವಶ್ಯವಿದ್ದು, ಇದರ ಪೈಕಿ ಅರಣ್ಯ ಪ್ರದೇಶವು 5051 ಹೆ, (ವನ್ಯಜೀವಿ ಪ್ರದೇಶ-3181.9 ಹೆ., ಮೀಸಲು ಅರಣ್ಯ ಪ್ರದೇಶ-1869.5 ಹೆ) ಹಾಗೂ ರೆವೆನ್ಯು ಪ್ರದೇಶ-201 ಹೆ. ಹೊಂದಿರುತ್ತದೆ. ಅದರಂತೆ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಮಂತ್ರಾಲಯದ ತೀರುವಳಿ ಅವಶ್ಯವಿರುತ್ತದೆ. **ನ್ಯಾಯಾಲಯದ ಪ್ರಕರಣ :** ತಮಿಳುನಾಡು ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಿನಾಂಕ:30-11-2018 ರಂದು M.A. No.3127 of 2018 ಅನ್ನು ದಾಖಲಿಸಿ, (ಅ) ಕೇಂದ್ರ ಜಲ ಆಯೋಗವು ದಿನಾಂಕ:22-11-2018 ರಂದು ಸದರಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ರಾಜ್ಯಕ್ಕೆ ನೀಡಿರುವ ಅನುಮತಿಯನ್ನು ತಡೆಹಿಡಿಯಲು, (ಆ) ಸದರಿ ಅನುಮತಿಯನ್ನು ಕೇಂದ್ರ ಆಯೋಗವು ಹಿಂಪಡೆಯಲು, (ಇ) ರಾಜ್ಯವು ಡಿ.ಪಿ.ಆರ್. ತಯಾರಿಸುವ ಪ್ರಕ್ರಿಯೆಯನ್ನು ತಡೆಹಿಡಿಯಲು; (ಈ) ಸದರಿ ಪ್ರಕರಣವು ಇತ್ಯರ್ಥಗೊಳ್ಳುವವರೆಗೂ ಸದರಿ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನಿರ್ದೇಶಿಸಲು ಪ್ರಾರ್ಥಿಸಿದ್ದು, ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.
ಈ	ಅತ್ಯಂತ ಸೂಕ್ತವಾಗಿರುವ ಈ ಯೋಜನೆಯ. ಕಾಮಗಾರಿಗಳನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು?	ಸದರಿ ಯೋಜನೆಯ ವಿವರವಾದ ವರದಿಗೆ ಕೇಂದ್ರ ಜಲ ಆಯೋಗ ಹಾಗೂ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಮಂತ್ರಾಲಯದ ತೀರುವಳಿಗಳನ್ನು ಪಡೆದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಸಂಖ್ಯೆ:ಜಸಂಇ 63 ಎನ್‌ಎಲ್‌ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ